**ಸಾಕ್ಷಿಯನ್ನು ದಿಃ 22.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಯರ ಪರ ವಕೀಲರಿಂದಃ**

1. ಖಾಲಿ ನಿವೇಶನ ನಮ್ಮದು ಎಂದು ಕೋರಿ ಈ ದಾವೆ ಹಾಕಿರುತ್ತೇನೆ. ಸದರಿ ಸ್ವತ್ತಿಗೆ ಇ-ಖಾತೆಯನ್ನು ಮಾಡಿಸಿಲ್ಲ. ಅದರ ಸಲುವಾಗಿ ಅರ್ಜಿಯನ್ನು ಸಹ ಸಲ್ಲಿಸಿಲ್ಲ.

2. ನಮ್ಮ ಗ್ರಾಮದ ಬೇರೆ ಬೇರೆ ಮನೆ ಹಾಗೂ ನಿವೇಶನಗಳಿಗೆ ಪಂಚಾಯತಿಯಿಂದ ಇ-ಖಾತೆ ನೀಡಿದ್ದಾರೆ ಎಂದರೆ ಸರಿ.

3. ದಾವಾ ಆಸ್ತಿಗೆ ಅಸೆಸ್ಮೆಂಟ್ ನಂಬರ್ ಇಲ್ಲ. ಸದರಿ ಸ್ವತ್ತಿಗೆ ಡಿಮ್ಯಾಂಡ್ ನಂಬರ್ ಇದೆ, ಅದರ ನಂ.59. ಸ್ವತ್ತಿನ ನಂಬರ್ 56.

4. ದಾವಾ ಸ್ವತ್ತಿನ ಚಕ್ಕುಬಂದಿ ಗೊತ್ತು. ಪೂರ್ವಕ್ಕೆಃ ತೋಪಮ್ಮ ರವರ ಮನೆ, ಪಶ್ಚಿಮಕ್ಕೆಃ ತೋಪಮ್ಮ ರವರ ಮನೆ, ಉತ್ತರಕ್ಕೆಃ ರಸ್ತೆ ಹಾಗೂ ಬಾವಿ, ದಕ್ಷಿಣಕೆಃ ಹಳೆ ಕೊಪ್ಪಲಿಗೆ ಹೋಗುವ ಓಣಿ. ಸದರಿ ಪಶ್ಚಿಮಕ್ಕೆ ಇರುವ ತೋಪಮ್ಮ ರವರ ಗಂಡನ ಹೆಸರು ಪುಟ್ಟೇಗೌಡ.

5. ದಾವಾ ನಿವೇಶನವನ್ನು ಗಜ ಅಳತೆಯಲ್ಲಿ ನಮೂದಿಸಿದ್ದಾರೆ. ಪೂರ್ವ ಪಶ್ಚಿಮ 11 ಗಜ, ದಕ್ಷಿಣ ಉತ್ತರ 44 ಗಜ.

6. ಈ ದಾವೆಯಲ್ಲಿ ಅಡಿ ಲೆಕ್ಕದಲ್ಲಿ ವಿಸ್ತೀರ್ಣ ನಮೂದಿಸಿದೆ. ಪೂರ್ವ ಪಶ್ಚಿಮ 39 ಅಡಿ, ದಕ್ಷಿಣ ಉತ್ತರ 11 ಅಡಿ. ಆ ಬಗ್ಗೆ ಗ್ರಾಮ ಪಂಚಾಯತಿಯಿಂದ ಯಾವುದೇ ದಾಖಲೆ ನೀಡಿಲ್ಲ.

7. ನಾನು ವಿದ್ಯಾಭ್ಯಾಸ ಮಾಡಿಲ್ಲ.

8. ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಗೊತ್ತು.

9. ನಿಪಿ - 1 ರಿಂದ 6 ರಲ್ಲಿ ದಾವಾ ನಿವೇಶನದ ವಿಸ್ತೀರ್ಣ ನಮೂದು ಇಲ್ಲ ಎಂದರೆ ಸರಿಯಲ್ಲ.

10. ದಾವಾ ಸ್ವತ್ತು ನನಗೆ ನನ್ನ ತಾತ ಕಳಸೇಗೌಡರ ಕಡೆಯಿಂದ ಬಂದಿದೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

11. ಕಳಸೇಗೌಡರಿಂದ ನನಗೆ ವರ್ಗಾವಣೆಯಾದ ಬಗ್ಗೆ ಎಂ.ಆರ್ ದಾಖಲೆ ಇದೆಯಾ ಎಂದರೆ, ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

12. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

13. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ, ಇಲ್ಲ.

14. ನೀವು ದಾವಾ ನಿವೇಶನವನ್ನು ಅಳತೆ ಮಾಡಿಸಿದ್ದೀರಾ ಎಂದರೆ, ನಾವು ಅಳತೆ ಮಾಡಿಸಲು ಹೋದಾಗ ಪ್ರತಿವಾದಿಗಳು ತಂಟೆ ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

15. ಪ್ರತಿವಾದಿಗಳು ದಿಃ 15.11.2021 ಕ್ಕಿಂತ ಹಿಂದೆ ತಕರಾರು ಮಾಡಿರುತ್ತಾರೆ. ಅದರ ದಿನಾಂಕ ನನಗೆ ಗೊತ್ತಿಲ್ಲ, ಆದರೆ ಗಲಾಟೆ ಮಾಡಿರುತ್ತಾರೆ. ಆ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿಲ್ಲ. ಅದರ ಸಲುವಾಗಿ ಊರಿನಲ್ಲಿ ಪಂಚಾಯತಿ ಸಹ ಆಗಿರುವುದಿಲ್ಲ.

16. ಪ್ರತಿವಾದಿಗಳು ಈ ದಾವೆಗೆ ಏನು ತಕರಾರು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

17. ದಾವಾ ಜಮೀನು ಪ್ರತಿವಾದಿಗಳ ತಂದೆ ಕರಿಗೌಡರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿಯವರು ಬದುಕಿರುವವರೆಗೆ ಅವರೇ ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಮರಣಾನಂತರ ಅವರ ಮಕ್ಕಳು ಪ್ರತಿವಾದಿಗಳು ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

18. ನೀವು ಹಾಜರುಪಡಿಸಿರುವ ದಾಖಲೆಗಳಿಗೆ ಹಾಗೂ ಕರಿಗೌಡರ ಸ್ವತ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

19. ದಾವಾ ಸ್ವತ್ತಿನಲ್ಲಿ ನೀವು ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

20. ದಾವಾ ಸ್ವತ್ತು ನಿಮ್ಮ ಪಿತಾರ್ಜಿತ ಸ್ವತ್ತಲ್ಲ, ನೀವು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

21. ನಿಮಗೆ ಹಾಗೂ ದಾವಾ ಸ್ವತ್ತಿಗೆ ಸಂಬಂಧ ಇಲ್ಲದಿದ್ದರೂ, ಪ್ರತಿವಾದಿಗಳಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಹಾಕಿರುತ್ತೀರಾ ಎಂದರೆ ಸರಿಯಲ್ಲ.

22. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ.

23. ನಿಮ್ಮ ವಾದಪತ್ರದಲ್ಲಿ ಬರೆದ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ